**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **54/2025**

| | | |
|---|---|---|
| ಸಾಕ್ಷಿದಾರರ ಹೆಸರು | - ಸಿದ್ದಮ್ಮ | ಪಿಡಬ್ಲೂ - 01 |
| ಗಂಡನ ಹೆಸರು | - ವೆಂಕಟೇಶ | ಸಿಡಬ್ಲೂ - 01 |
| ವಯಸ್ಸು | - 65 ವರ್ಷ | |
| ಉದ್ಯೋಗ | - ಗೃಹಿಣಿ | |
| ವಾಸ ಸ್ಥಳ | - ಶಂಕರಪುರ, ಚಿಕ್ಕಮಗಳೂರು | |

ದಿನಾಂಕಃ 02.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಶಾರದ ನನ್ನ ಮಗಳು. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ನನ್ನ ಅಳಿಯ ಅಂದರೆ ಮೃತಳ ಗಂಡ. ಚಾಸಾ.4 ನನ್ನ ಅಕ್ಕನ ಮಗ. ಚಾಸಾ.5 ನನ್ನ ಅಕ್ಕನ ಮಗಳು. ಚಾಸಾ.2 ಮತ್ತು 3 ಗೊತ್ತು. ಚಾಸಾ.6 ಮತ್ತು 7 ನನಗೆ ಗೊತ್ತಿಲ್ಲ.

2. ಚಾಸಾ.3 ಸಂತೋಷರವರಿಗೆ ಸೇರಿದ ಚಿಕ್ಕಮಗಳೂರಿನ ಶಂಕರಪುರದಲ್ಲಿರುವ ಮನೆಯನ್ನು ನಾನು ಭೋಗ್ಯಕ್ಕೆ

ಹಾಕಿಸಿಕೊಂಡು ವಾಸವಾಗಿದ್ದೇನೆ. ಸದರಿ ಮನೆಯಲ್ಲಿ ನನ್ನ ಮಗಳಾದ ಶಾರದ ಮತ್ತು ಆಕೆಯ ಗಂಡನಾದ ಆರೋಪಿ ನನ್ನೊಂದಿಗೆ ವಾಸವಾಗಿದ್ದರು. ಈಗ್ಗೆ 2 ವರ್ಷಗಳ ಹಿಂದೆ ಕರ್ತಿಕೆರೆ ವಾಸಿಯಾದ ಲಕ್ಷ್ಮಮ್ಮನ ಮಗನಾದ ಆರೋಪಿಯು ನನ್ನ ಮಗಳು ಶಾರದಳನ್ನು ಪ್ರೀತಿಸಿ ಮದುವೆ ಮಾಡಿಕೊಂಡಿದ್ದನು. ಆರೋಪಿ ಗಾರೆ ಕೆಲಸ ಮಾಡಿಕೊಂಡಿದ್ದನು. ಆದರೆ ಮನೆಗೆ ಬೇಕಾದ ವಸ್ತುಗಳನ್ನು ತಂದು ಹಾಕುತ್ತಿರಲಿಲ್ಲ, ಮನೆಯ ಖರ್ಚಿಗೆ ಯಾವುದೇ ಹಣವನ್ನು ಕೊಡುತ್ತಿರಲಿಲ್ಲ ಮತ್ತು ಆತ ನನ್ನ ಮಗಳ ಯೋಗಕ್ಷೇಮವನ್ನು ನೋಡುತ್ತಿರಲಿಲ್ಲ. ಆರೋಪಿ ಕೆಲಸಕ್ಕೆ ಹೋಗಿ ಸಂಪಾದಿಸಿದ ಹಣವನ್ನೆಲ್ಲಾ ತನ್ನ ಕುಡಿತಕ್ಕೆ ಖರ್ಚು ಮಾಡುತ್ತಿದ್ದನು. ಆರೋಪಿ ದುಡಿದ ಹಣ ಆತನ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಆರೋಪಿ ಕುಡಿದು ಬಂದು ನಾವು ಆತನಿಗೆ ಊಟ ಹಾಕಿಕೊಡುವುದು ತಡ ಮಾಡಿದರೆ ಆತ ನನ್ನ ಮಗಳಿಗೆ ಹೊಡೆಯುತ್ತಿದ್ದನು. ಆರೋಪಿ ಕುಡಿದು ಬಂದು ಸಣ್ಣಪುಟ್ಟ ವಿಚಾರದಲ್ಲಿ ನನ್ನ ಮತ್ತು ನನ್ನ ಮಗಳೊಂದಿಗೆ ಗಲಾಟೆ ಮಾಡಿ ಹಲವಾರು ಬಾರಿ ನಮಗೆ ಹೊಡೆದಿದ್ದನು. ಆರೋಪಿ ಪ್ರತಿದಿನ ಗಲಾಟೆ ಮಾಡುತ್ತಿದ್ದರಿಂದ ಮನೆ ಬಿಟ್ಟು ಹೋಗುವಂತೆ ನಾನು ಹೇಳಿದ್ದೆನು, ಆದರೆ ಆತ ನನ್ನ ಮಗಳನ್ನು ಕರೆದುಕೊಂಡು ಹೋಗಿ ಸಾಕುವುದಿಲ್ಲವೆಂದು ಹೇಳಿದ್ದನು. ನನ್ನ ಮಗಳು 9 ತಿಂಗಳ ಗರ್ಭಿಣಿಯಾಗಿದ್ದಳು.

3. ಈಗ್ಗೆ 6 ತಿಂಗಳುಗಳ ಹಿಂದೆ ಒಂದು ದಿನ ಆರೋಪಿ ಕೆಲಸಕ್ಕೆ ಹೋದವನು ವಿಪರೀತವಾಗಿ ಕುಡಿದು ರಾತ್ರಿ ಮನೆಗೆ ಬಂದನು. ಗರ್ಭಿಣಿಯಾಗಿದ್ದ ನನ್ನ ಮಗಳು ನನ್ನ ಜೊತೆ ಮಲಗಿದ್ದಳು. ಮನೆಗೆ ಬಂದವನೇ ಆರೋಪಿ ನನ್ನ ಮಗಳನ್ನು ಕುರಿತು, ನನಗೆ

ಊಟ ಹಾಕಿಕೊಡು ಮತ್ತು ನನ್ನೊಂದಿಗೆ ಬಂದು ಮಲಗು ಎಂದು ಕರೆದು ನನ್ನ ಮಗಳನ್ನು ನೆಲಕ್ಕೆ ಬೀಳಿಸಿ ಆಕೆಯ ಕೂದಲನ್ನು ಹಿಡಿದು ಎಳೆದಾಡಿ ಮುಷ್ಟಿ ಮಾಡಿ ಆಕೆಯ ತಲೆಗೆ ಹಲವಾರು ಬಾರಿ ಬಲವಾಗಿ ಹೊಡೆದನು. ಆರೋಪಿ ನನ್ನ ಮಗಳನ್ನು ಕುರಿತು, ನಿನ್ನನ್ನು ಮತ್ತು ನಿನ್ನ ಮಗುವನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿ ಕಾಲಿನಿಂದ ಹಲವಾರು ಬಾರಿ ನನ್ನ ಮಗಳ ಮೈಕೈಗೆ ಮತ್ತು ಹೊಟ್ಟೆಗೆ ಒದ್ದನು. ಆಗ ನನ್ನ ಮಗಳು ಜ್ಞಾನ ತಪ್ಪಿ ಬಿದ್ದಳು. ನಾನು ಆಕೆಯನ್ನು ಬಿಡಿಸಲು ಹೋದಾಗ ಆರೋಪಿ ನನ್ನ ಮೈಕೈಗೆ ಕಾಲಿನಿಂದ ಒದ್ದು ನೋವು ಮಾಡಿದನು. ನನ್ನ ಮಗಳಿಗೆ ಪೆಟ್ಟಾಗಿ ಸುಸ್ತಾಗಿದ್ದರಿಂದ ಆಕೆಗೆ ಮಾತೇ ಬರುತ್ತಿರಲಿಲ್ಲ ಮತ್ತು ಪ್ರಜ್ಞೆ ಇರಲಿಲ್ಲ. ನನಗೂ ನೋವಾಗಿದ್ದರಿಂದ ರಾತ್ರಿ ಹಾಗೆಯೇ ಮಲಗಿದೆನು.

4. ಮಾರನೆ ದಿನ ಬೆಳಿಗ್ಗೆ ಸುಸ್ತಾಗಿದ್ದ ನನ್ನ ಮಗಳನ್ನು ನಾನು ಮತ್ತು ಆರೋಪಿ ಒಂದು ಆಟೋದಲ್ಲಿ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದೆವು. ಅಲ್ಲಿನ ವೈದ್ಯರು ನನ್ನ ಮಗಳಿಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆ ಅಲ್ಲಿ ಸಾಧ್ಯವಿಲ್ಲವೆಂದು ಹೇಳಿ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿ ಆಕೆಯನ್ನು ಅಂಬ್ಯುಲೇನ್ಸಿನಲ್ಲಿ ಹಾಸನದ ಆಸ್ಪತ್ರೆಗೆ ಕಳುಹಿಸಿ ಕೊಟ್ಟರು. ಸದರಿ ಅಂಬ್ಯುಲೇನ್ಸಿನಲ್ಲಿ ನಾನು ಮತ್ತು ವೈದ್ಯಕೀಯ ಸಿಬ್ಬಂದಿ ಮಾತ್ರ ನನ್ನ ಮಗಳ ಜೊತೆ ಹಾಸನಕ್ಕೆ ಹೋದೆವು. ಆರೋಪಿ ನಮ್ಮ ಜೊತೆ ಬರಲಿಲ್ಲ. ಅದೇ ದಿನ ರಾತ್ರಿ ಹಾಸನದ ಆಸ್ಪತ್ರೆಯಲ್ಲಿ ವೈದ್ಯರು ನನ್ನ ಮಗಳಿಗೆ ಅಪರೇಷನ್ ಮಾಡಿ ನನ್ನ ಮಗಳ ಗರ್ಭದಲ್ಲಿದ್ದ ಗಂಡು ಮಗುವನ್ನು ಹೊರ ತೆಗೆದು ಅದನ್ನು

ಐ.ಸಿ.ಯು. ನಲ್ಲಿ ಇರಿಸಿದರು. ಸದರಿ ಮಗು ಜೀವಂತವಾಗಿದೆ. ಆದರೆ ನನ್ನ ಮಗಳಿಗೆ ಪ್ರಜ್ಞೆ ಬರಲೇ ಇಲ್ಲ ಮತ್ತು ಆರೋಪಿ ನನ್ನ ಮಗಳು ಮತ್ತು ಅವರ ಮಗುವನ್ನು ನೋಡಲು ಬರಲಿಲ್ಲ. ಆರೋಪಿ ಮೇಲೆ ಹೇಳಿದ ರೀತಿ ನನ್ನ ಮತ್ತು ನನ್ನ ಮಗಳ ಮೇಲೆ ಹಲ್ಲೆ ಮಾಡಿದ್ದ ವಿಚಾರವನ್ನು ವೈದ್ಯರಿಗೆ ತಿಳಿಸಿದ್ದೇನೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು).**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ